INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
PageNo,08-14
Peer Reviewed Journal, Referred Journal

# "ಸೌಂಗಧಿಕಾ" ಪರಿಮಳದಲ್ಲಿ ಕಂಡ ದ್ರೌಪದಿಯ ತುಮುಲ

ಡಾ.ಜಿ. ಶ್ರೀನಿವಾಸ.[1]

ಎಚ್.ಎಸ್. ವೆಂಕಟೇಶಮೂರ್ತಿ ಅವರು ನನಗೆ ಇಷ್ಟವಾದ ಕವಿ. ಅವರ 'ಕಥನ ಕವನ' ಕುರಿತು ವಿಮರ್ಶೆ ಮಾಡುವಷ್ಟು ದೊಡ್ಡಮಟ್ಟದ ವಿಮರ್ಶಕ ನಾನಲ್ಲ. ಒಂದೊಂದು ಸಾಲನ್ನೂ ಒಬ್ಬೊಬ್ಬರೂ ವಿಭಿನ್ನವಾದ ರೀತಿಯಲ್ಲಿ ಅರ್ಥಮಾಡಿಕೊಂಡು ಬರೆಯಲು ಪ್ರಯತ್ನಿಸುತ್ತಾರೆ. ಮಹಾಭಾರತದ ಸ್ತ್ರೀ ಪಾತ್ರಗಳಲ್ಲಿ ಅತ್ಯಂತ ಗಮನಾರ್ಹವಾದ ದ್ರೌಪದಿಯ ಪಾತ್ರದ 'ಗೃಹೀತಕಲ್ಪನೆ'ಯನ್ನು ಎದುರಿಗಿಟ್ಟುಕೊಂಡು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಾಭಾರತದ ಕಥೆಯನ್ನು ಚಿತ್ರಿಸುವ ಕಾವ್ಯ, ನಾಟಕ, ವಿಮರ್ಶೆಗಳನ್ನು ಗಮನಿಸಿದ್ದೇನೆ. ಮಾನವೀಯ ಸಂಘರ್ಷದ ಚಿತ್ರ ಮತ್ತು ದ್ರೌಪದಿಯ ವ್ಯಕ್ತಿತ್ವವನ್ನು ಸೂಚಿಸುವ ಕೆಲವು ಸನ್ನಿವೇಶಗಳು ಪಂಪ ಭಾರತದಲ್ಲಿವೆ. ಪಂಪ 'ಸ್ತ್ರೀತ್ವದ ವ್ಯಥೆ'ಯನ್ನು ಮನಗಂಡಿದ್ದಾನೆ. ಅನೇಕ ವಿದ್ವಾಂಸರು ಹೇಳುವಂತೆ ಪಂಪನು ದ್ರೌಪದಿಗೆ ನ್ಯಾಯವೊದಗಿಸದೆ ಸೋತಿದ್ದಾನೆ; ಅವನು ದ್ರೌಪದಿಗೆ ಅರ್ಜುನನೊಂದಿಗೆ ಸಿಂಹಾಸನದಲ್ಲಿ ಕುಳಿತು ಪಟ್ಟಾಭಿಷೇಕ ಮಾಡಿಸಿಕೊಳ್ಳುವ ಅವಕಾಶ ಮಾಡಿಕೊಡಲಿಲ್ಲ! ಹಾಗಿದ್ದೂ ಪಂಪನ ದ್ರೌಪದಿ ಮೂಲ ಭಾರತಕ್ಕಿಂತ ಸರ್ವಾಂಗ ಸುಂದರ ಪ್ರತಿಮೆಯಾಗಿ ಅಭಿವ್ಯಕ್ತಗೊಂಡಿದ್ದಾಳೆ; ಪ್ರಭಾವಶಾಲಿ ಪಾತ್ರವಾಗಿ ಚಿತ್ರಣಗೊಂಡಿದ್ದಾಳೆ.

ರನ್ನ ಕವಿಯ ಸಾಹಸ ಭೀಮವಿಜಯ ಕಾವ್ಯದಲ್ಲಿ ದ್ರೌಪದಿ ನಾಯಕಿ. ಅವಳ ಛಲ, ರೋಷ, ಪ್ರತೀಕಾರ ಭಾವನೆಗಳು ಅದರಲ್ಲಿ ಪ್ರಕಟಗೊಂಡಿವೆ. "ನಾನು ಅನಿಲ ಪುತ್ರ ನೀನು ಅನಲ ಪುತ್ರಿ" ಎಂಬ ಗದಾಯುದ್ಧದ ಭೀಮಸೇನನ ಮಾತು ಅಲಂಕಾರಿಕವಾಗಿ ಮೂಡಿಬಂದಿದೆ. ಕುಮಾರವ್ಯಾಸನ ಭಾರತಕ್ಕೆ ಕೃಷ್ಣನೇ ಮೂಲ ಸೆಲೆ. ಮಾನವೀಯತೆಯ ಜೊತೆಗೆ ಅದಕ್ಕೆ ಪ್ರೇರಕವಾದ ದೈವಿಶಕ್ತಿಯ ಲೀಲೆಯನ್ನು ಕವಿ ಚಿತ್ರಿಸಿದ್ದಾನೆ. ಕುಮಾರವ್ಯಾಸ ಭಾರತ ಕಾವ್ಯದ ಬನಿಗಟ್ಟುವುದು ದ್ರೌಪದಿಯ ಸ್ವಯಂವರದ ಅನಂತರವೇ. ಕೃಷ್ಣನ ಅನಂತರದ ಎರಡನೆಯ ಸ್ಥಾನ ಅವಳಿಗೆ ಮೀಸಲು. ಅವಳಿಗೂ ಕೃಷ್ಣನಿಗೂ ನಡುವೆ ಇರುವ ಭಕ್ತಿಯ ಕೊಂಡಿಗಳಂತೆ ಉಳಿದ ಪಾಂಡವರು ಸೇರಿಕೊಂಡಿದ್ದಾರೆ. ಕೃಷ್ಣೆಯು ಕೃಷ್ಣನ ತಂಗಿ. ಬಲರಾಮನ ತಂದೆಯ ತಂಗಿ ಕುಂತಿ. ಹಾಗಾಗಿ ಕುಂತಿ ಕೃಷ್ಣನಿಗೆ ಅತ್ತೆ. ಆ ಅತ್ತೆಯ ಮಕ್ಕಳಾದ ಪಾಂಡವರು ಅವನಿಗೆ

[1].ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮೈದುನರು. ಅವರ ಪತ್ನಿಯಾದ ದ್ರೌಪದಿ ಅವನಿಗೆ ತಂಗಿ. ಅವಳು ಪರಮ ಪತಿವ್ರತೆಯಾಗಿ ಚಿತ್ರಿತಗೊಂಡಿದ್ದಾಳೆ. ಪಾಂಡವರ ವಿಜಯಕ್ಕೆ ಅಣ್ಣತಂಗಿಯರ ಪಾತ್ರದ ಮೂಲಕ ಜೀವಚೈತನ್ಯ ನೀಡಿದ ಹಿರಿಮೆ ಕುಮಾರವ್ಯಾಸನದಾಗಿದೆ.

ಮನುಷ್ಯ ಸಂಬಂಧಗಳನ್ನು ಬೆಸೆಯುವಕೊಂಡಿಯಂತೆ ದ್ರೌಪದಿಯ ಚಿತ್ರಣ ನೀಡಿದ ಪಂಪ, ರನ್ನ ಮತ್ತು ಕುಮಾರವ್ಯಾಸರನ್ನು ನೋಡಿದ ಮೇಲೆ ಆಧುನಿಕ ಸಾಹಿತ್ಯಕ್ಕೆ ಬಂದರೆ ಎಚ್ಚೆಸ್ವಿ ಅವರ ಪೌರಾಣಿಕ ನಾಟಕಗಳು, ಅದರಲ್ಲೂ ಸ್ವಗತದ ರೂಪದಲ್ಲಿ ಚಿತ್ರಿತವಾದ ಉರಿಯ ಉಯ್ಯಾಲೆ ಎಂಬ ಅವರ ಪ್ರಸಿದ್ಧ ಏಕವ್ಯಕ್ತಿ ನಾಟಕದಲ್ಲಿ ಅವಳು ಮಹಾಭಾರತದಲ್ಲಿ ನಡೆದ ಪ್ರಮುಖ ಘಟನೆಗಳನ್ನು ತನ್ನ ಅಂತರಾಳದ ನೆನಪಿನಂಗಳದಿಂದ ಒಂದೊಂದಾಗಿ ಹೆಕ್ಕಿ ತೆಗೆಯುತ್ತಾಳೆ. ತಾನು ಹಸುವೊಂದು ತಿಂದ ಆಹಾರವನ್ನು ಮೆಲುಕು ಹಾಕುವಂತೆ ಅವಳಲ್ಲಿ ಸ್ಮರಣೆಯ ಕನವರಿಕೆ ಎದ್ದುಕಾಣುತ್ತದೆ. ಅದರಲ್ಲಿ ಅವಳು ತನಗುಂಟಾಗುವ ತುಮುಲಗಳನ್ನು ತಾನೇ ವಿಶ್ಲೇಷಿಸುತ್ತಾ, ವಿಮರ್ಶಿಸುತ್ತಾ ಸಾಗುತ್ತಾಳೆ. ಅವಳು ಅಗ್ನಿಕುಂಡದಲ್ಲಿ ಜನಿಸಿ, ಜೀವನವಿಡೀ ಅಗ್ನಿಪರೀಕ್ಷೆಗೆ ಗುರಿಯಾದವಳು. ಉರಿಯ ಉಯ್ಯಾಲೆಜೀರೆದಂತೆ, ಅದರಿಂದ ಹೊಮ್ಮುವ ಪ್ರಭಾವಳಿಯ ಒಂದೊಂದು ಕಿಡಿಯಲ್ಲೂ ಅವಳ ವ್ಯಕ್ತಿತ್ವದ ಹೊಸ ಹೊಸ ಆಯಾಮಗಳು ಚಿತ್ರಣಗೊಂಡಿರುವುದನ್ನು ಗಮನಿಸಬಹುದು. ನಾಟಕ ಆರಂಭವಾಗುವಾಗ ದ್ರೌಪದಿಗೆ ಮಧ್ಯಮ ವಯಸ್ಸು. ಅವಳಲ್ಲಿ ಹೆಣ್ಣಿನ ಕೋಪ – ತಾಪ, ಆಸೆ – ಆಮಿಷ, ಅಂತರಾಳದ ತುಡಿತ – ಮಿಡಿತ ಮತ್ತು ಕಾಮ – ಪ್ರೇಮ ಸಹಜವಾಗಿರುವುದನ್ನು ಗಮನಿಸಬಹುದು.

ಎಚ್ಚೆಸ್ವಿ ಅವರ 'ಸೌಗಂಧಿಕಾ' ಕಥನ ಕವನವನ್ನು ಪ್ರಾಥಮಿಕ ಹಂತದ ವಿಶ್ಲೇಷಣೆಗೆ ವಿಮರ್ಶೆ ಮಾಡಲು 'ದ್ರೌಪದಿ' ಪಾತ್ರ ಪುನರ್ ಸೃಷ್ಟಿ ಕಾರ್ಯದಲ್ಲಿ ಯಶಸ್ವಿಯಾದ **ಉರಿಯ ಉಯ್ಯಾಲೆ** ಒಂದು ವೇದಿಕೆಯನ್ನು ನಿರ್ಮಾಣ ಮಾಡಿಕೊಡುತ್ತದೆ. ದ್ರುಪದ ರಾಜನ ಮಗಳಾಗಿ ಹುಟ್ಟಿದ ದ್ರೌಪದಿ, ಸಾಮಾನ್ಯ ಹೆಣ್ಣಿನಂತೆ ಬದುಕಿ ಪಡುವ ಬವಣೆ ಮುಂದಿನ ಸ್ತ್ರೀ ಕುಲಕ್ಕೆ ಪಾಠವನ್ನೂ ಕಲಿಸುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಅವರ ಪ್ರಸಿದ್ಧ ಕಥನ ಕವನವನ್ನು ವಿಮರ್ಶೆಗೆ ಒಳಗು ಮಾಡುತ್ತಿದ್ದೇನೆ.

ಕುಮಾರವ್ಯಾಸ ಸೌಗಂಧಿಕ ಪ್ರಸಂಗವನ್ನು ಅನನ್ಯವಾದ ರೀತಿಯಲ್ಲಿ ನಿರ್ವಹಿಸಿದ್ದಾನೆ. ಸೌಗಂಧಿಕ ಪುಷ್ಪದ ಅನ್ವೇಷಣೆಗೆ ಹೊರಟ ಭೀಮಸೇನ ಕಾಡಿನ ಮಧ್ಯದಲ್ಲಿ ದಾರಿ ಗಡ್ಡವಾಗಿ ಬಾಲವನ್ನು ಚಾಚಿ ಕುಳಿತ ಹನುಮಂತನನ್ನು ಕಂಡು, ಮಹಾವೀರನಾದ ತಾನು ಕಪಿಯ ಕೋರಿಕೆಯ ಮೇರೆಗೆ ಅದನ್ನೆತ್ತಿ ಸರಿಸಲು ಸೋತು ಸುಣ್ಣವಾಗಿ, ತನ್ನ ಅಹಂಕಾರಕ್ಕೆ ಒದಗಿದ ಅಘಾತದಿಂದ ವಿನಮ್ರನಾಗಿ, ಮುಂದೆ ಸೌಗಂಧಿಕ ಪುಷ್ಪದ ಅನ್ವೇಷಣೆಗೆ ಹೊರಡುತ್ತಾನೆ.

ಭೀಮಸೇನನ ಪರಾಕ್ರಮವನ್ನು ವರ್ಣಿಸುವುದು ಕುಮಾರವ್ಯಾಸನಲ್ಲಿ ಮುಖ್ಯವಾಗುತ್ತದೆ. ಆಂಜನೇಯನಿಂದ ಭೀಮನ ಅಹಂಕಾರಕ್ಕೆ ಅಘಾತವಾದುದನ್ನು ಆ ಸಂದರ್ಭದ ಮೂಲಕ ಸೂಚಿಸಿದರೂ ಮುಂದಿನ ಕತೆ ಭೀಮನ ಪರಾಕ್ರಮದ ಪ್ರದರ್ಶನಕ್ಕೆ ಸೀಮಿತವಾಗುತ್ತದೆ.

ಎಚ್ಚೆಸ್ವಿ ಅವರ ಸೃಜನಶೀಲ ಕಥನ ಕವನ 'ಸೌಗಂಧಿಕಾ'ವು ಮೂಲಗಳಿಗಿಂತ ಭಿನ್ನವಾದ ರಚನೆಯಾಗಿದೆ. ಪುರಾಣದ ಪಾತ್ರ, ಘಟನೆಗಳನ್ನು ಭೂತಕಾಲದಿಂದ ವರ್ತಮಾನಕ್ಕೆ ಸೆಳೆದು ಆಧುನಿಕತೆಯ ಹಿನ್ನೆಲೆಯಲ್ಲಿ ಅವುಗಳನ್ನು ಪುನರ್ ಸೃಷ್ಟಿಸಿದ್ದಾರೆ. ಸ್ವತಃ ವಿಮರ್ಶೆ ಮಾಡುವಂತೆ ಇವರ ಕಥನ ಕವನಗಳು ಸಾಗುತ್ತವೆ. ಪ್ರಸ್ತುತ ಕವನವು ಇದಕ್ಕೊಂದು ನಿದರ್ಶನ. ಪೌರಾಣಿಕವೆಂಬಂಥ ಪ್ರಸಂಗಗಳ ಮೂಲಕವೇ ಆಧುನಿಕ ಸಮಸ್ಯೆಗಳನ್ನು ಇವರು ಚಿತ್ರಿಸಿದ್ದಾರೆ.

'ಸೌಗಂಧಿಕಾ' ಭೀಮನಿಗೆ ಮಹಾವಾನರನಿಂದ ಉಂಟಾದ ಅವಮಾನದಲ್ಲಿಗೆ ನಿಂತು ಅದರಿಂದ ಅವನಿಗೆ ದೊರೆತ ಎಚ್ಚರವೇ ಅವನ ಪಾಲಿಗೆ ಸೌಗಂಧಿಕಾ ವಾದುದನ್ನು ಮತ್ತು ಅಹಂಕಾರದ ನಿರಶನ ತನ್ಮೂಲಕ ಜಗತ್ತಿನ ಚೈತನ್ಯದ ಸಾಕ್ಷಾತ್ಕಾರವೇ ಅವನ ಪಾಲಿಗೆ ದೊರೆತ ಸೌಗಂಧಿಕವಾದುದನ್ನು ಧ್ವನಿಸುತ್ತದೆ. ಕೊನೆಯಲ್ಲಿ ಮನುಷ್ಯನ ಅಹಂಕಾರಕ್ಕೆ ಅಘಾತ ಯಾವ ರೀತಿಯ ವಿವೇಕವನ್ನು ಕಲಿಸುತ್ತದೆಂಬುದನ್ನು ವಿವೇಚನೆಗೆ ಒಳಪಡಿಸುವುದು ಕವಿಯ ಉದ್ದೇಶವಾಗಿದೆ.

ಮೊದಲ ಭಾಗದಲ್ಲಿ ದ್ರೌಪದಿಯ ಸ್ವಗತದ ವಿವರಗಳಿವೆ. ದ್ರೌಪದಿಯ ಏಕಾಂಗಿ ತನ ಅಭಿವ್ಯಕ್ತಗೊಂಡಿದೆ. ಪಾಂಡವರ ವನವಾಸದ ಅವಧಿಯ ಒಂದು ದಿನದ ಮುಂಜಾನೆ ಕೃಷ್ಣಸ್ತುತಿಯೊಂದಿಗೆ ನಸುಕಿನಲ್ಲಿ ಏಳುವ ದ್ರೌಪದಿಯ ಮನದ ಭಾವನೆಗಳನ್ನು ಬಿಚ್ಚಿಕೊಳ್ಳುತ್ತಾ ಕವನ ಆರಂಭವಾಗುತ್ತದೆ. ....'ಪಕ್ಕ ನೋಡಿದರೆ ಏನಿದೆ ಮಣ್ಣು'.... ಎಂಬ ಸಾಲು. ಐವರು ಗಂಡಂದಿರಿದ್ದರೂ ಒಂಟಿಯಾದ ದ್ರೌಪದಿಯ ನಿರಾಸೆ, ನೋವು, ಒಂಟಿತನದ ಸೂಚನೆಯಾಗಿ ಬಂದಿದೆ. ಕಿಟಕಿಯಿಂದಾಚೆ ದಿಟ್ಟಿಸುವ ಅವಳಿಗೆ ಸೂರ್ಯೋದಯದ ಸುಂದರ ದೃಶ್ಯದ ವಿಹಂಗಮ ನೋಟಕಾಣಿಸುತ್ತದೆ. ಜೊತೆಗೆ ಗರಿಗೆದರಿ ಕುಣಿಯುವ ನವಿಲು ಅರ್ಜುನನ ಬಾಣದಗುರಿಗೆ ಸಿಲುಕಿ ಭೂಮಿ ಗುರುಳಿದ ರೀತಿ ಅವಳ ನೆನಪಿನಾಳದಲ್ಲಿ ತೇಲಿ ಬರುತ್ತದೆ. ಓಲೆಗರಿಗಳ ನಡುವೆ ಧರ್ಮಜ ಏನನ್ನೋ ಹುಡುಕುತ್ತಿದ್ದಾನೆ. ಇವನನ್ನು ನೋಡುತ್ತಲೇ ಅವಳು ಸಾಮಾನ್ಯ ಗ್ರಾಮೀಣ ಮಹಿಳೆಯಂತೆ ಮಡಿ ಬಟ್ಟೆಯನ್ನು ಬಗಲಲ್ಲಿ ಸಿಕ್ಕಿಸಿಕೊಂಡು ನದೀ ಕಡೆಗೆ ಸ್ನಾನಕ್ಕೆ ಹೊರಡುತ್ತಾಳೆ. ನಡುವೆ ಅವಳು ದಾರಿಯುದ್ದಕ್ಕೂ ತನ್ನವರ ಬಗೆಗೆ ಮನದಲ್ಲೇ ವಿಶ್ಲೇಷಣೆ ಮಾಡುತ್ತಾಳೆ.

ನಕುಲ, ಸಹದೇವರು... ಕಾಣಲಿಲ್ಲ. (ಮಹಾಭಾರತದುದ್ದಕ್ಕೂ ಮರೆಯಲ್ಲೇ ಇದ್ದಂತೆ). ಇನ್ನು ಭೀಮ. ಭಾರೀ ಮೀಸೆ, ಸದಾಚುರುಕು ಎಲ್ಲೆಲ್ಲೂ ಸಾಹಸ ಕೃತ್ಯದಲ್ಲಿ ನಿರತ. ಹಿರಿಯನಾದ ಧರ್ಮರಾಯ ಎಲ್ಲೋ ಶಾಸ್ತ್ರಗಳ ಅಭ್ಯಾಸದಲ್ಲಿ ಮುಳುಗಿ ಹೋಗಿದ್ದಾನೆ. ಅವನು ಸ್ಥಾನಕ್ಕೆ ತಕ್ಕಂತೆ ಸದಾ ಏನನ್ನೋ ಹುಡುಕುತ್ತಾ, ತನ್ನನ್ನೇ ಕಳೆದು ಕೊಂಡಂತಿದ್ದ. ಅವನದು 'ತತ್ವಜ್ಞಾನಿಯೊಬ್ಬನ ವ್ಯಕ್ತಿತ್ವದಂತೆ' ಅರ್ಜುನಶರ ವಿದ್ಯಾಸಾಧನೆಯಲ್ಲಿ ನಿರತನಾಗಿದ್ದಾನೆ. ಸದಾತನ್ನ ಸಾಹಸದಿಂದ ಹೆಸರು ಮಾಡುವ ಹುಚ್ಚು ಹತ್ತಿಸಿಕೊಂಡು ಅಸಾಧ್ಯವಾದದ್ದನ್ನು ಸಾಧ್ಯವಾಗಿಸಲು ಏಕಾಗ್ರತೆಯಿಂದ ಹೊರಡುವವನು.

ಆತನ ಗುರಿಯ ಕುರಿತ ಘಟನೆ.... ಮರದ ಮೇಲೆ ಅಲ್ಲ ಮರದೊಳಗೆ.. ಮೇಲೆ ಅಲ್ಲ ಆ ಎಲೆಯೊಂದು ಪುಟ್ಟಕಣ್ಣಿನಲಿ ಅದೇ ಏಕಾಗ್ರತೆ, ತನ್ಮಯತೆ. ತನ್ನೊಡನೆ ಇರುವಾಗಲು ಎಂದೆಲ್ಲಾ ನೆನೆಸಿಕೊಂಡ ದ್ರೌಪದಿ... ನಾಚುತ್ತಾಳೆ. ಜೊತೆಗೆ ತನ್ನವರೈವರಿಂದತನು – ಮನದ ಬೇಗೆಯನ್ನು ನೀಗಿಸಿಕೊಳ್ಳಲು ಸಾಧ್ಯವಾಗದೆ ಚಡಪಡಿಸುತ್ತಾಳೆ... (ಕರ್ಣನನ್ನು ನೋಡಿ ಮೆಚ್ಚಿದ ದ್ರೌಪದಿಯ ಸೂಚನೆ ಕೊಡುತ್ತಾನೆ).

ಏನೆಲ್ಲವಿದ್ದರೂ 'ಪ್ರೀತಿ'ಯೊಂದನ್ನೇ ಸದಾ ಬಯಸುವ ಹೆಣ್ಣಿನ ಅಂತರಾಳದ ಕೂಗು ದ್ರೌಪದಿಯ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ... ಎದ್ದೆಯಾ ಎಂದೆನ್ನಲಿಲ್ಲ ಹೊರಟುದೆಲ್ಲಿಗೆ ಕೇಳಲಿಲ್ಲ. ತನ್ನ ಬೇಕು–ಬೇಡಗಳನ್ನೇ ಗಂಡ ಸದಾ ಸಣ್ಣಪುಟ್ಟ ಸಂಗತಿಗಳಲ್ಲೂ ಗಮನಿಸಬೇಕೆನ್ನುವ ಸ್ತ್ರೀ ಸಹಜ ಬಯಕೆ ಇಲ್ಲಿ ತನ್ನ ಅತೃಪ್ತ ಬಯಕೆಗಳು, ಆಸೆಗಳು,.. ಇಂಗಿತಗಳನ್ನು ಮುಂದಿನ ಪದ್ಯ ಸಾಲುಗಳು ಸಾಂಕೇತಿಕವಾಗಿ, ಪ್ರತಿಮಾತ್ಮಕವಾಗಿ ಬಿಂಬಿಸುತ್ತವೆ. ಅಲ್ಲೆಲ್ಲಾತೃಪ್ತಿಗಿಂತಲೂ ನಿರಾಸೆಯೇ ಹೆಚ್ಚೆನ್ನುವುದು... "ಉಯ್ಯಾಲೆಯಲ್ಲಿ ಕಿರಿತಗಳು" ಸಾಲು ತಿಳಿಸುತ್ತದೆ.

ಸಾಗುವ ದಾರಿಯಲ್ಲಿ ಬಗೆಬಗೆಯ ಹೂವು, ಮರ–ಗಿಡಗಳ ವಾಸನೆ–

ಮನಸ್ಸಿನಲ್ಲಿ ಸಾವಿರಾರು ಆ ನಟನೆಗಳ ಗೋಜಲು

ಬಿಚ್ಚಿದ ಮುಡಿಯಲ್ಲಿನ ಕೇಶರಾಶಿ (ಕೂದಲೆಳೆಗಳಂತೆ) ಹೋಲಿಕೆ ಮಾಡಲಾಗಿದೆ.

ಕಾಡಿನೊಳಗಡೆ ಹಲವು ಕಡೆಓಡಾಡಿ ಪರಿಮಳದಲ್ಲೆಲ್ಲ ಹೂವ ಗುರುತಿಸಬಲ್ಲ ಸಹಜತೆ.. ಇದ್ದರೂ ಈ ಎಲ್ಲವನ್ನು ಮಿರಿದ ಹೊಸ ಸುವಾಸನೆಯೊಂದು ತನ್ನೆಡೆಗೆ ಪಸರಿಸಿ ಬರುವುದರಿಂದ ದ್ರೌಪದಿ ಉದ್ರೇಕಗೊಳ್ಳುತ್ತಾಳೆ, ಮೈಮರೆಯುತ್ತಾಳೆ. ಪ್ರಾಣಿ, ಪಕ್ಷಿ, ಹೂವು.. ಮಣ್ಣ ಮೇಲೆ ಬೆಳೆವ, ಓಡಾಡುವ ಯಾವುದರಲ್ಲೂ ಇಲ್ಲದ, ಹೊಸ ಹೂವಿನೊಂದಿಗೆ ತನು – ಮನವನ್ನೇ ಹೊಸ ಲೋಕಕ್ಕೆ ಒಮ್ಮುವ ಈ ಸುವಾಸನೆ ಹೂವಿನದ್ದೇ ಆದರೆ ತಾನು ಮುಡಿದೆನು. ಮುಡಿಯಬೇಕಿದನೆಂದು ಗಂಟು ಬಿಚ್ಚಿದ ತನ್ನ ಮುಡಿಯ ನೇವರಿಸುವಳು ದ್ರೌಪದಿ.... (ದ್ರೌಪದಿಯ ಹಠ, ಮುಡಿಯ ಹಿಂದಿನ ಕಥೆ, ಬಿಚ್ಚಿದ

ಮುಡಿಯಲ್ಲೂ ಹೂ ಮುಡಿಯಬೇಕೆನ್ನುವ ಬಯಕೆ ಒಂದು ಕಡೆ ಪುರಾಣದ ದ್ರೌಪದಿಯ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರೆ. (ಮಹಾಭಾರತವೆಂದರೆ ದ್ರೌಪದಿಯ ಮುಡಿಯನ್ನು ಬಿಚ್ಚಿಕಟ್ಟಿದ ಕಥೆ) ಮತ್ತೊಂದು ಕಡೆ ತನಗೆ ಅನಗತ್ಯವಾದರೂ, ಅಸಾಧ್ಯವಾದರೂ ಎಲ್ಲವೂ ಬೇಕೆನ್ನುವ (ಸುಂದರವಾದದ್ದೆಲ್ಲವೂ ತನಗಿರಲೇಬೇಕೆನ್ನುವ) ಆಧುನಿಕ ಮಹಿಳೆಯ ಮನೋಧರ್ಮ ಇಲ್ಲಿದೆ. (... ಮುಂದಿನ ಸಾಲುಗಳಲ್ಲಿ ಸೌಂಗಧಿಕ ಪುಷ್ಪ ಸುವಾಸನೆ ದ್ರೌಪದಿಯನ್ನೇ ಆವರಿಸಿಕೊಂಡ ಬಗೆಯನ್ನು ಕವಿ ವರ್ಣಿಸುತ್ತಾರೆ. ಮೇಲಿನ ವಿಚಾರಕ್ಕೆ ಪೂರಕವಾಗಿ)

ಸೌಗಂಧಿಕಾ ಭಾಗ–2ರಲ್ಲಿ ಈ ಪುಷ್ಪವನ್ನು ತನಗಾಗಿ ದಕ್ಕಿಸಿಕೊಳ್ಳಲು ತೀರ್ಮಾನಿಸಿದ ದ್ರೌಪದಿ ಭೀಮನೇ ತನ್ನ ಬಯಕೆಯನ್ನು ಈಡೇರಿಸುವವನು ಎಂಬ ಹಲವು ಸಂದರ್ಭಗಳನ್ನು ನೆನಪಿಸಿಕೊಂಡು ಭೀಮನನ್ನು ಹುಡುಕಿ ಹೊರಡುತ್ತಾಳೆ. (ಮೊದಲ ಪದ್ಯ ಕೊಳದೊಳಗಿಳಿದ ಭೀಮನ ಸಾಹಸಕ್ರೀಡೆ) ಹೊತ್ತು ಮೇಲೇರುವ ಕೊಳದೊಳಗಿಳಿದ ಸಮಯವಾದರೂ ಭೀಮ ಕೊಳದಿಂದ ಹೊರಬರುವುದನ್ನೇ ಕಾಯುತ್ತ ಪಾಂಚಾಲಿ ದಂಡೆಯಲಿ, ಮರದ ನೆರಳಲ್ಲಿದ್ದಳು – 'ಹುಟ್ಟಿದಂತೆ ಕೂಸು ಹರಯದ ಹದ್ದ ಹಾರಿಸಿತೆ" ಎಂದು ಮನದಲ್ಲೇ ಅಂದುಕೊಳ್ಳುತ್ತಾ. ಅಂದರೆ– ತನ್ನ ಆಸೆಯನ್ನು, ಕಷ್ಟಗಳನ್ನು ಕೇಳುವ ಕಿವಿ ಭೀಮನಿಗಿದೆ. ವಜ್ರದೇಹಿಯಾದರೂ ಮೃದು ಹೃದಯಿ ಮಿಡುಕುಳ್ಳಗಂಡ. ಅದರಲ್ಲೂ ಹೆಣ್ಣಿನ ಭಾವನೆಗಳನ್ನು, ಸುಲಭವಾಗಿ ಅರ್ಥೈಸಿಕೊಳ್ಳಬಲ್ಲ ಸೂಕ್ಷ್ಮತೆ ಇರುವವನು. ದ್ರೌಪದಿಯನ್ನು ಕೊಳದ ದಂಡೆಯಲ್ಲಿ ನೋಡಿದ ಭೀಮನಿಗೆ ಭಯಮಿಶ್ರಿತ ಅಚ್ಚರಿ. (ಮೈನವಿರು ಮೇಲೆದ್ದು...) "ಈ ದಟ್ಟ ಕಾಡೊಳಗೆ ಒಂಟಿಯಾಗಿ ಏಕೆ ಬಂದೆ? ಕಳ್ಳಕಾಕರು, ಕಾಡು ಪ್ರಾಣಿಗಳಿವೆ" ಎಂಬ ಭೀಮನ ಮಾತಿಗೆ 'ದ್ರೌಪದಿ ಅವಳು ಹೋಳುವ, ಗುಂಟು ಭೀಮ' ಎನ್ನುವ ಆಕೆಯ ಮಾತು ಅವರೆಲ್ಲರಿಂದ ತನ್ನನ್ನು ರಕ್ಷಿಸಬಲ್ಲ ಶಕ್ತಿ ಭೀಮನಿಗಿದೆ ಎಂಬ ದ್ರೌಪದಿಯ ನಂಬಿಕೆಯನ್ನು ತಿಳಿಸುತ್ತದೆ. ಆಕೆಯ ನಂಬಿಕೆ, ಜಾಣ್ಮೆಯನ್ನು ಮೆಚ್ಚಿದ ಭೀಮನು ಕಾರಣ ಕೇಳಿದಾಗ, ಅವಳು 'ವಾಯುಪುತ್ರ ನಿನ್ನಕಡೆ ಬರಲಿಲ್ಲ ವಾಸನೆ ಸೆಳೆದ ಕಡೆ ಬಂದೆ ನಿನಗೇನು ನೆಗಡಿಯಾಗಿದೆಯೇ'... ಎನ್ನುತ್ತಾ ಲೇವಡಿ ಮಾಡಿ ಸರಸದಲ್ಲೇ 'ಸ್ಥೂಲಗಳು... (ಅತಿದಪ್ಪ) ಸೂಕ್ಷ್ಮಾತಿ ಸೂಕ್ಷ್ಮವಗ್ರಹಿಸಬಲ್ಲವೆ" ಎಂಬ ಛೇಡಿಸುತ್ತಾಳೆ.

"ನನ್ನಕಣ್ಣಿಗೆ ನೀನೆ ಹೂ......

ಹೂವ ಮುಡಿವುದೆ ಹೂವು? ......

ಎನ್ನುತ್ತಾನೆ. ಇದು ಭೀಮನ ಪ್ರೀತಿಯ ಪರಾಕಾಷ್ಠೆ.

ಭೀಮ – ದ್ರೌಪದಿಯರ ಅನ್ಯೋನ್ಯತೆ, ಗಾಂಭೀರ್ಯದ ಪ್ರೀತಿ, ಸರಸ (ಮುಂದಿನ ಪಠ್ಯವೂಕೂಡ)

ಭೀಮ ಸೌಂಗಧಿಕ ಪುಷ್ಪವನ್ನು ಹುಡುಕಲು ಹೊರಟ ಪರಿ ನಡುವೆ ಹನುಮಂತನ ಭೇಟಿ. ಭೀಮನಿಗೆ ಮಹಾವಾನರನಿಂದ ಒದಗಿದ ಅಘಾತದ ಸಂದರ್ಭದಲ್ಲಿಗೆ ನಿಂತು ಅದರಿಂದ ಭೀಮನಿಗೆ ದೊರೆತ ಎಚ್ಚರವೇ ಅವನ ಪಾಲಿನ ಸೌಗಂಧಿಕವಾಯಿತು ಎಂಬುದನ್ನು ಹೇಳಿ ಭೀಮನಿಗೆ ಅಹಂಕಾರ ಘಾತದ ಜೊತೆಗೆ ತನ್ಮೂಲಕ ಜಗತ್ತಿನ ಜೀವಶಕ್ತಿ (Life Force) ಸಾಕ್ಷಿ ಆಗಿದೆ. ಅದೇ ಅವನ ಪಾಲಿಗೆ ದೊರೆತ ಸೌಗಂಧಿಕ. ಈ ಕವಿತೆಯಲ್ಲಿ ಮನುಷ್ಯನ ಅಹಂಕಾರಕ್ಕೆ ಒದಗುವ ಆಘಾತವನ್ನೂ, ಅದರಿಂದ ಅದೃಷ್ಟವಶಾತ್ ದೊರೆಯುವ ವಿವೇಕವನ್ನು ಎಚ್.ಎಸ್.ವಿ. ಅವರು ಧ್ವನಿಸಿದ್ದಾರೆ.

ದ್ರೌಪದಿಯ ಆಸೆಯನ್ನು ಪೂರೈಸಲು ಹೊರಟ ಭೀಮ ತನ್ನ ಅತುಲ ಬಲ ಮತ್ತು ಪರಾಕ್ರಮದಿಂದ ತನಗೆ ಎದುರಾದ ಎಲ್ಲ ಅಡೆ–ತಡೆಗಳನ್ನು ನಿವಾರಿಸುತ್ತಾ ಸಾಗುತ್ತಾನೆ. ಆ ಪ್ರಯತ್ನದಲ್ಲಿ ಅವನಿಗಾದ ನೋವು, ಹಿಂಸೆಗಳಲ್ಲಿ ಅವನ ಪ್ರೀತಿಯೇ ಮೈದೋರುತ್ತದೆ. ಆತ ಹೊರಟಿದ್ದು ಸೌಗಂಧಿಕಾ ಎಂಬ ಹೂವಿಗಾಗಿಯೆ? ಅಥವಾ ಅದನ್ನು ಮುಡಿಯಲು ಬಯಸಿದ ಹೆಣ್ಣಿಗಾಗಿಯೆ? ಎಂಬ ಪ್ರಶ್ನೆಯನ್ನು ಎತ್ತುವ ಕವಿ ಆತ ಹೊರಟಿದ್ದು ಬೆಳಕನ್ನು ಅಂದರೆ ವಿವೇಕವನ್ನು ಹುಡುಕುತ್ತಾ ಎಂಬ ಸೂಚನೆ ಕೊಡುತ್ತಾರೆ. ಆ ಬೆಳಕು ಅಂದರೆ ವಿವೇಕ ಅವನಿಗೆ ಆತನ ಅಹಂಕಾರ ಅಳಿಯಬೇಕು; ಹಿರಿತನದ ತಿಳಿವಿಗೆ ಸೋಲಬೇಕು. ಮಹಾವೀರನಾದ ಭೀಮ ಸೋಲುತ್ತಾನೆ. ಅಥವಾ ಸೋತು ಮಹಾವೀರನಾಗುತ್ತಾನೆ. ಆಗ ಅವನಿಗೆ ತನ್ನ ವ್ಯಕ್ತಿತ್ವ ವಿಕಸನದದಾರಿ ಕಾಣುತ್ತದೆ. ವಿವೇಕದ ವಿಶ್ವರೂಪ ಕಾಣುತ್ತಾನೆ. ಅವನು ಲೌಕಿಕದಿಂದ ಅಲೌಕಿ ಕದೆಡೆಗೆ ಚಾಚಿಕೊಳ್ಳುತ್ತಾನೆ. ಅವನಿಗೆ ಅಲ್ಲಿ ದ್ರೌಪದಿಯ ಪ್ರೀತಿಯ ಅರಿವಾಗುತ್ತದೆ. ಆ ಹೊಸ ಪ್ರೇಮದ ಕಾಣ್ಕೆಯೊಂದಿಗೆ ಅವನು ಅವಳಲ್ಲಿ ಮರಳುತ್ತಾನೆ. ಅವಳು ಬಯಸಿದುದೂ ಆ ಪ್ರೇಮದ ಸುಗಂಧವನ್ನೇ. ಅದಕ್ಕೇ ಈ ಕವಿತೆ ಅಲ್ಲಿಂದ ಮುಂದಕ್ಕೆ ಭೌತಿಕ ಸೌಂಗಧಿಕಾ ಪುಷ್ಪವನ್ನು ತರಲು ಭೀಮನನ್ನು ಕರೆದುಕೊಂಡು ಹೋಗುವುದಿಲ್ಲ. (ಅಣ್ಣ–ತಮ್ಮರ ಸಮಾಗಮ ಹನುಮನ ದಿವ್ಯದರ್ಶನ ಪಡೆದ ಭೀಮ, ಕಣ್ತುಂಬಿಕೊಂಡು ದ್ರೌಪದಿಯೆಡೆಗೆ ಹಿಂತಿರುಗುತ್ತಾನೆ).

## ಪರಾಮರ್ಶನ ಗ್ರಂಥಗಳು


1. ವೆಂಕಟೇಶಮೂರ್ತಿ. ಹೆಚ್.ಎಸ್.–ಉರಿಯ ಉಯ್ಯಾಲೆ
2. ಪಂಪ ಭಾರತದ ದ್ರೌಪದಿ ವಿಚಾರ–ಕನ್ನಡ ನುಡಿ: ಸಂಪುಟ–16,ಸಂಚಿಕೆ–12.
3. ಎಚ್ಚೆಸ್ವಿ ಕಾವ್ಯ ನೋಟ–ಸಂಪಾದಕರು:ಸುಬ್ರಾಯ ಚೊಕ್ಕಾಡಿ
4. ಅಂತಃಕರಣ ಎಚ್ಚೆಸ್ವಿ 70ರ ಸ್ಪಂಧನೆ ಸಂಪುಟ – ಸಂಪಾದಕರು, ಆರ್. ಲಕ್ಷ್ಮಣ ರಾವ್, ಬಾಲ ಸುಬ್ರಹ್ಮಣ್ಯ ರಾಘವೇಂದ್ರ ಪಾಟೀಲ.